

# ಮಹಾನ್ ಸೇತುವೆ



ಮಹಾಗೋಡೆಯ ಕಾರಣಕ್ಕೆ ವಿಶ್ವ ಖ್ಯಾತಿ ಹೊಂದಿದ್ದ ಚೀನಾ ಈಗ ಮತ್ತೊಂದು ಮೈಲಿಗಲ್ಲನ್ನು ಜಾಗತಿಕ ಮಟ್ಟದಲ್ಲಿ ನಿರ್ಮಿಸಿದೆ. ಇತ್ತೀಚೆಗೆ ಅತ್ಯಂತ ಎತ್ತರದ ಸೇತುವೆಯನ್ನು ಇಲ್ಲಿ ನಿರ್ಮಿಸಲಾಗಿದೆ. 565 ಮೀಟರ್ (1854 ಅಡಿ) ಎತ್ತರದಲ್ಲಿ ಸೇತುವೆ ನಿರ್ಮಿಸುವ ಮೂಲಕ ಜಗತ್ತಿನ ಅತ್ಯಂತ ಎತ್ತರದ ಸೇತುವೆ ನಿರ್ಮಿಸಿದ ಕೀರ್ತಿಗೆ ಪಾತ್ರವಾಗಿದೆ. ಕೆಲವು ಬೃಹತ್ ಸೇತುವೆಗಳು ಇನ್ನೂ ಕೆಲವು ಇಲ್ಲಿವೆ. ಚೀನಾದ ನೈರುತ್ಯ ಭಾಗದ ಪರ್ವತ ಪ್ರದೇಶದಲ್ಲಿ ಯುನ್ನಾನ್ ಮತ್ತು ಗುಯ್‌ಝೂ ಎಂಬ ನಗರಗಳಿಗೆ ಅಡ್ಡಲಾಗಿ ಬೀಪಾನ್ ಎಂಬ ನದಿ ಹರಿದಿದೆ. ಅದಕ್ಕೆ ಬಳಸಿ ಹೋಗುವ ರಸ್ತೆ ಮಾರ್ಗವನ್ನು ತಪ್ಪಿಸಲು ಈ ಸೇತುವೆಯನ್ನು ಕಟ್ಟಲಾಗಿದೆ. ಎರಡು ನಗರಗಳ ನಡುವೆ ಹಬ್ಬಿರುವ ಗಿರಿ ಕಣಿವೆಯನ್ನು ಈ ಸೇತುವೆ ಬೆಸೆಯುವ ಮೂಲಕ ಸುಗಮ ಸಂಚಾರಕ್ಕೆ ದಾರಿ ಮಾಡಿದೆ.

ಮೊದಲು ಈ ನಗರಗಳ ನಡುವೆ ಸಂಚರಿಸುವ ವಾಹನಗಳಿಗೆ ಅಧಿಕ ಇಂಧನ– ಸಮಯ ವ್ಯಯವಾಗುತ್ತಿತ್ತು. ಅದಕ್ಕೆ ಹೋಲಿಸಿದರೆ ಈಗ ಶೇ.75ರಷ್ಟು ಸಮಯ ಉಳಿತಾಯ ಆದಂತೆ ಆಗಿದೆ. ಅಂದರೆ ನಾಲ್ಕು ಗಂಟೆ ಸಮಯ ಉಳಿಯುತ್ತಿದೆ. 1341 ಮೀಟರ್ ಉದ್ದದ ಬೃಹತ್ ಸೇತುವೆ ನಿರ್ಮಾಣಕ್ಕೆ ರೂ. 977 ಕೋಟಿ ವೆಚ್ಚವಾಗಿದೆ. ಸೇತುವೆಯ ನಿರ್ಮಾಣ ಕಾಮಗಾರಿಯನ್ನು 2013ರಲ್ಲಿ ಎರಡು ಕಡೆಯಿಂದಲೂ ಆರಂಭಿಸಲಾಗಿತ್ತು. ಕಳೆದ ವರ್ಷ ಸೆಪ್ಟೆಂಬರ್ 2016ರ ಅಂತ್ಯದಲ್ಲಿ ಪೂರ್ಣಗೊಂಡಿತ್ತು. ಸಾರ್ವಜನಿಕ ಉಪಯೋಗಕ್ಕೆ ಡಿ.30ರಂದು ಮುಕ್ತಗೊಳಿಸಲಾಗಿದೆ. ಸುಮಾರು 200 ಮಹಡಿ ಕಟ್ಟಡದಷ್ಟು ಎತ್ತರದಲ್ಲಿ ಈ ಸೇತುವೆಯಿದೆ ಎಂದು ಅಂದಾಜಿಸಬಹುದು.

■ ತೊಗರ್ಸಿ